# ಮಕ್ಕಳಿಗಾಗಿ ಬೈಬಲ್
### ಅರ್ಪಿಸುವ



## ಸಭೆಯು ಸಂಕಟವನ್ನು ಅನುಭವಿಸಿದ್ದು


ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸ್ರೈಲೇಸ್: Vinay Shirol
ಅಳವಡಿಸುವವರು: Ruth Klassen


ಶ60ರ 56ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada

ಯೇಸು ಕ್ರಿಸ್ತನು ಪರಲೋಕ್ಕೆ ಎತ್ತಲ್ಪಟ್ಟ ೫೦ ದಿನಗಳ ನಂತರ ಆತನ ಹಿಂಬಾಲಕರ ಮೇಲೆ ಪವಿತ್ರಾತ್ಮನು ಬಂದನು. ಅದರೆ ತಂದೆ, ಮಗ, ಪವಿತ್ರಾತ್ಮನು ಒಂದೆ ಎಂದು ಶಿಷ್ಯರಿಗೆ ಅರ್ಥವಾಗಲಿಲ್ಲ. ಅದರೆ ದೇವರು ಅವರ ಮದ್ಯದಲ್ಲಿಟ್ಟುಕೊಳ್ಳವುದಕ್ಕೆ ಅವರು ಬಹಳ ಸಂತೋಷವುಳ್ಳವರಾಗಿದ್ದರು ಮತ್ತು ದೇವರು ಅವರ ಮದ್ಯ ಅನೇಕ ಅದ್ಬುತಗಳನ್ನು ಮಾಡಿ ಯೇಸುವಿನ ಸಂದೇಶವನ್ನು ಜನರಿಗೆ ತಿಳಿಸಲು ಸಹಾಯ ಮಾಡಿದನು.



1

ಅದನ್ನು ಕೇಳಿ ಜನರು ಯೇಸುವನ್ನು ನಂಬಿದರು, ಅವರಿಗೆ ಅದರಣೆವುಂಟಾಯಿತು, ಆದರೆ ಆನನೀಯ ಮತ್ತು ಸಪ್ಫೈರಳು ಎಂಬ ದಂಪತಿಗಳು ದೇವರನು ಅಗೌರವಿಸಿದರು. ಅವರು ತಮಗಿರುವ ಸ್ಥಳವನ್ನು ಮಾರಿ ಬಂದ ಹಣದಲ್ಲಿ ತಮಗಾಗಿ ಸಲ್ಪ ಬಚ್ಚಿಟ್ಟುಕೊಂಡು ಉಳಿದಿದ್ದನ್ನು ಅಪೋಸ್ತಲರ ಬಳಿಗೆ ಕೊಡಲು ತಂದರು.



2


‘ಪವಿತ್ರಾತ್ಮನಿಗೆ ವಿರೋದವಾಗಿ ಸುಳ್ಳು ಹೇಳುವುದಕ್ಕೆ ಸೈತಾನನು ನಿಮ್ಮ ಹೃದಯದಲ್ಲಿ ತುಂಬಿಕೊಂಡಿದ್ದೆನು...?’ ಎಂದು ಪೇತ್ರನು ಅನನೀಯನನು ಕೇಳಿದನು.
3
‘ನೀವು ಸುಳ್ಳಾಡಿದ್ದು ಮನುಷ್ಯರಿಗಲ್ಲ ದೇವರಿಗೆ’ಎಂದು ಹೇಳಿದಾಕ್ಷಣ ಅನನೀಯನು ಬಿದ್ದು ಅಲ್ಲೆ ಸತ್ತನು. ಯೌವನಸ್ಥರು ಅವನ ಶರೀರವನ್ನು ವಸ್ತ್ರದಲ್ಲಿ ಸುತ್ತಿ ಹೊತ್ತುಕೊಂಡು ಹೋಗಿ ಹೂಣಿಟ್ಟರು.
4
ಈ ಸುದ್ದಿಯನ್ನು ತಿಳಿದ ಸಪ್ಪೈರಳು ಬಂದಳು, ಅವಳು ಹಾಗೆಯೆ ಹೇಳಿದಳು ಅವಳು ಸತ್ತಳು ಈ ಸುದಿಯನ್ನು ಕೇಳಿದ ಎಲ್ಲರಲ್ಲಿಯು ಭಯವುಂಟಾಯಿತು.
5
ದೇವರಾದ ಪವಿತ್ರಾತ್ಮನು ಅಪೋಸ್ತಲರ ಮೂಲಕವಾಗಿ ಅನೇಕ ಆದ್ಬುತ ಸೂಚಕ ಕಾರ್ಯವನ್ನು ಮಾಡಿದನು ಮತ್ತು ಪೇತ್ರನ ನೆರಳು ಯಾರಾರ ಮೇಲೆ
ಬೀಳುತ್ತಿತೊ ಅವರಿಗೆಲ್ಲ ಸೌಖ್ಯವಾಗುತ್ತಿತು.
6
ಇಂತಹ ಕಾರ್ಯವನ್ನು ನೋಡಿದ ಅನೇಕ ಜನರು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟರು. ಇದನ್ನು ನೋಡಿದ ಮಹಾ ಯಾಜಕರಿಗೆ ಸಿಟ್ಟು ಬಂದು ಅವರನ್ನು ಹಿಡಿದು ಸರಮನೆಗಳಲ್ಲಿ ಹಾಕಿದರು.
7
ದೇವರು ತನ್ನ ದೂತನನ್ನು ಕಳಿಸಿ ಅವರನ್ನು ಸರಮನೆಯಿಂದ ಹೊರ ತಂದು, ದೇವರು ಅವರನ್ನು ದೇವಾಲಯದ ಮುಂಬಾಗದಲ್ಲಿ ನಿಂತು ಯೇಸುವಿನ ಸಂದೇಶವನ್ನು ಹೇಳುವಂತೆ ಮಾಡಿದನು.
8



ಅವರು ಯೇಸುವಿನ ಕುರಿತು ಪ್ರಸಂಗಿಸಲು ಪ್ರಾರಂಬಿಸಿದರು. ಯಾಜಕರು ಬಂದು ಸರಮನೆಯನ್ನು ನೋಡಿದಾಗ ಅದು ಖಾಲಿಯಾಗಿತ್ತು.

9

ಅದನ್ನು ನೋಡಿದ ಮಹಾ ಯಾಜಕರು ಅವರನ್ನು ಗದರಿಸಿ ನೀವು ಆ ಹೆಸರನ್ನು ಎತ್ತಬಾರದು ಎಂದು ನಾವು ನಿಮ್ಮನ್ನು ಎಚ್ಚರಿಸಿರಲಿಲ್ಲವೇ? ಎಂದು ಅವರನ್ನು ಕೇಳಿದರು. ಆಗ ಪೇತ್ರನು ಮತ್ತು ಉಳಿದ ಅಪೋಸ್ತಲರು 'ದೇವರ ಮಾತನ್ನು ಕೇಳುವುದಕ್ಕಿಂತ ನಿಮ್ಮ ಮಾತನ್ನು ಕೇಳುವುದು ಯುಕ್ತಯೋ' ಎಂದು ಹೇಳಿದಾಗ ಮಹಾ ಯಾಜಕರಿಗೆ ಅವರನ್ನು ಕೊಲ್ಲುವಂತ ಕೋಪ ಬಂತು.



10

ಆದರೆ ಹಾಗೆ ಮಾಡದೆ ಅವರನ್ನು ಹೊಡೆಸಿ ಬಿಟ್ಟು ಬಿಟ್ಟರು. ಅಂತಹ ನೋವಿನಲ್ಲಿಯು ಅಪೋಸ್ತಲರು ದೇವರ ವಾಕ್ಯವನ್ನು ಸಾರುವವರಾದರು.



11

ಸ್ತೆಪನನು ಎಂಬುವಂತ ಯವನಸ್ಥನು ಹಿಡಿಯಲ್ಪಟ್ಟನು, ಅವನು ದೇವರನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಪವಿತ್ರಾತ್ಮನು ಅವನಿಗೆ ಯೇಸುವಿನ ಸಂದೇಶವನ್ನು ಹೇಳುವಂತೆ ಪ್ರೇರೆಪಿಸಿದನು, ಅದನು ಕೇಳಿದ ಕೆಲವರು ಅವನು ದೇವರಿಗೆ ವಿರೋದವಾಗಿ ಮಾತಾಡುತ್ತಾನೆಂದು ಹೇಳಿದರು.



12

ಮತ್ತು ಅವನು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟದ್ದ ಕಾರಣದಿಂದ ಅವನನ್ನು ಕಲ್ಲುಗಳಿಂದ ಹೊಡೆದು ಸಾಯಿಸಿದರು.



13

ಸ್ತೆಪನನು ಸಾಯುವ ಸಂದರ್ಭದಲ್ಲಿ ಪವಿತ್ರಾತ್ಮ ಭರಿತನಾಗಿದ್ದು ಪರಲೋಕವು ತರೆದಿರುವುದನ್ನು ಕಂಡನು ಅಲ್ಲಿ ಯೇಸುವು ಮಹಿಮೆಯಿಂದ ತಂದೆಯ ಬಲಭಾಗದಲ್ಲಿ ನಿಂತಿರುವುದನ್ನು ಕಂಡನು.



14

ಆತನು ಸಾಯುವಾಗ 'ದೇವರೆ
ಇವರು ಮಾಡಿದ ತಪ್ಪುಗಳನ್ನು
ಇವರ ಮೇಲೆ ಹೋರಿಸದೆ
ಇವರನ್ನು ಕ್ಷಮಿಸು'
ಎಂದು ಹೇಳಿ 'ನನ್ನ
ಆತ್ಮವನ್ನು ಸೇರಿಸಿಕೊ'
ಎಂದು ಕೂಗಿ
ಪ್ರಾಣ ಬಿಟ್ಟನು.



15

ಸ್ತೆಪನನ ಸಾವಿನಿಂದ ದೊಡ್ಡ ಹಿಂಸೆ ಪ್ರಾರಂಬವಾಯಿತು. ಅಲ್ಲಿ ಒಬ್ಬ ಯೌವನಸ್ಥನಾದ ಸೌಲನೆಂಬುವವನು ಸ್ತೆಪನನ ಸಾವಿಗೆ ಸಹಾಯ ಮಾಡಿದ್ದನು. ಕ್ರಿಸ್ತನನ್ನು ನಂಬಿದ ಜನರನ್ನು ಹಿಡಿದು ಸರಮನೆಗಳಲ್ಲಿ ಹಾಕುತ್ತಿದ್ದನು.



16

ಅದನ್ನು ನೋಡಿದ ಅನೇಕರು ಯುದಾಯ, ಮತ್ತು ಸಮಾರ್ಯಸೀಮೆಗಳಿಗೆ ಚದರಿದರು. ಆದರೆ ಅಪೋಸ್ತಲರು ಮಾತ್ರವೇ ಯೇರುಸಲೇಮ್‌ನಲ್ಲಿ ಇದ್ದರು.



17

ಆದರೂ ಅವರ ವೈರಿಗಳು ಅವರನ್ನು ಕೊಲ್ಲುವುದಕ್ಕೆ ಹೊಂಚುಹಾಕುತ್ತಿದ್ದರು. ಅಲ್ಲಿಂದ ಚದರಿದ್ದ ಜನರು ಅವರು ಹೋಗುವ ಕಡೆಗಳೆಲ್ಲ ಶುಭವಾರ್ತೆಯನ್ನು ಸಾರುತ್ತಿದ್ದರು. ಅದನ್ನು ಯಾರಿಂದಲು ನಿಲ್ಲಿಸಲು ಆಗಲಿಲ್ಲ. ಏಕೆಂದರೆ ಪವಿತ್ರಾತ್ಮನು ಅವರಿಗೆ ಸಹಾಯಮಾಡುತ್ತಿದ್ದನು.



18

ಸಭೆಯು ಸಂಕಟವನ್ನು ಅನುಭವಿಸಿದ್ದು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೋಸ್ತಲರ ಕೃತ್ಯ **5–7**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.